ತುಮಕೂರು ವಿಶ್ವವಿದ್ಯಾನಿಲಯ

ಪರೀಕ್ಷಾ ಭವನ, ಬಿ.ಹೆಚ್.ರಸ್ತೆ, ತುಮಕೂರು-572 103 ☎:0816-2255650, 2273511,ಫ್ಯಾಕ್ಸ್ :0816-2270719

ಸಂಖ್ಯೆ : ತು.ವಿ.: ಪ.ವಿ.:ಪಿ.ಸಿ.-09:2023-24: 586 ದಿನಾಂಕ:06.10.2023

ಅಧಿಸೂಚನೆ

ವಿಷಯ: 2022-23 ನೇ ಶೈಕ್ಷಣಿಕ ಸಾಲಿನ 2023 ರ ನವೆಂಬರ್ / ಡಿಸೆಂಬರ್ ಮಾಹೆಗಳಲ್ಲಿ ನಡೆಯಲಿರುವ ಸ್ನಾತಕೋತ್ತರ ಎಂ.ಬಿ.ಎ. ಮತ್ತು ಎಂ.ಸಿ.ಎ. ಪದವಿಗಳ ದ್ವಿತೀಯ ಮತ್ತು ನಾಲ್ಕನೇ (ನವೀನ ಮತ್ತು ಪೂರಕ) ಸೆಮಿಸ್ಟರ್‌ನ ಪರೀಕ್ಷೆಗಳಿಗೆ ಸಂಬಂಧಿಸಿದಂತೆ (2021-22 ರಿಂದ 2022-23 ನೇ ಸಾಲಿನವರೆಗೆ) ಎಲ್ಲಾ ಅರ್ಹ ವಿದ್ಯಾರ್ಥಿಗಳಿಂದ ಪರೀಕ್ಷಾ ಶುಲ್ಕ ಪಾವತಿಸುವ ಕುರಿತು.

* * * * *

2022-23 ನೇ ಶೈಕ್ಷಣಿಕ ಸಾಲಿನ 2023 ರ ನವೆಂಬರ್/ಡಿಸೆಂಬರ್ ಮಾಹೆಗಳಲ್ಲಿ ನಡೆಯಲಿರುವ ಸ್ನಾತಕೋತ್ತರ ಪದವಿಗಳ ದ್ವಿತೀಯ ಮತ್ತು ನಾಲ್ಕನೇ ಸೆಮಿಸ್ಟರ್‌ನ ಎಂ.ಬಿ.ಎ. ಮತ್ತು ಎಂ.ಸಿ.ಎ. ಪದವಿಗಳಿಗೆ ಸಂಬಂಧಿಸಿದಂತೆ (2021-22 ರಿಂದ 2022-23 ನೇ ಸಾಲಿನವರೆಗೆ) ಎಲ್ಲಾ ಅರ್ಹ (ನವೀನ ಮತ್ತು ಪೂರಕ) ವಿದ್ಯಾರ್ಥಿಗಳಿಂದ UUCMS ತಂತ್ರಾಂಶದ ಮೂಲಕ (ಶೈಕ್ಷಣಿಕ ವಿಭಾಗದಿಂದ ಪ್ರವೇಶಾನುಮೋದನೆ ಪಡೆದಿರುವಂತಹ) ಪರೀಕ್ಷಾ ಶುಲ್ಕವನ್ನು ಪಾವತಿಸಿಕೊಳ್ಳುವುದು.

ಸಂಬಂಧಪಟ್ಟ ವಿಭಾಗದ ಮುಖ್ಯಸ್ಥರು/ಸಂಯೋಜಕರು ಮತ್ತು ಕಾಲೇಜು ಪ್ರಾಂಶುಪಾಲರು UUCMS ತಂತ್ರಾಂಶದ ಮೂಲಕವೇ (ನವೀನ ಮತ್ತು ಪೂರಕ) ವಿದ್ಯಾರ್ಥಿಗಳು ಪರೀಕ್ಷಾ ಶುಲ್ಕವನ್ನು ಪಾವತಿಸುವಂತೆ ಖಚಿತಪಡಿಸಿಕೊಳ್ಳುವುದು. ವಿದ್ಯಾರ್ಥಿಗಳು ಭರ್ತಿ ಮಾಡಿದ ಅರ್ಜಿ ನಮೂನೆಗಳನ್ನು ಪರಿಶೀಲಿಸಿ UUCMS ತಂತ್ರಾಂಶದ ಮೂಲಕ ಅನುಮೋದಿಸುವುದು ಹಾಗೂ ವಿದ್ಯಾರ್ಥಿಗಳ ಪ್ರವೇಶಾನುಮೋದನೆ, ಪರೀಕ್ಷೆ ತೆಗೆದುಕೊಳ್ಳುವವರ ಅಂಕಿ-ಅಂಶಗಳನ್ನು ಬಾಹ್ಯವಾಗಿಯೂ ಕ್ರೋಢೀಕರಿಸಿ ವಿಶ್ವವಿದ್ಯಾನಿಲಯಕ್ಕೆ 13.11.2023 ದಿನಾಂಕದೊಳಗೆ ಈ ಕೆಳಕಂಡ ನಮೂನೆಯಂತೆ ಭರ್ತಿ ಮಾಡಿ ಸಲ್ಲಿಸತಕ್ಕದ್ದು.

ನಮೂನೆ - 01

ಕ್ರ.ಸಂ.	ವಿದ್ಯಾರ್ಥಿಯ ಹೆಸರು	ನೋಂದಣಿ ಸಂಖ್ಯೆ	ತೆಗೆದುಕೊಂಡಿರುವ ವಿಷಯ	ಶುಲ್ಕ ಪಾವತಿಸಿದ ವಿವರ & ದಿನಾಂಕ
1.				
2.				

ನಮೂನೆ - 02

ಕ್ರ.ಸಂ.	ಸೆಮಿಸ್ಟರ್	ಪತ್ರಿಕೆಯ ಹೆಸರು	ಪ್ರಶ್ನೆ ಪತ್ರಿಕೆ ಕೋಡ್	ಪರೀಕ್ಷೆ ತೆಗೆದುಕೊಂಡಿರುವ ವಿದ್ಯಾರ್ಥಿಗಳ ಒಟ್ಟು ಸಂಖ್ಯೆ
1.				
2.				

ಗಮನಿಸಬೇಕಾದ ದಿನಾಂಕಗಳು

1.	ಪರೀಕ್ಷಾ ಶುಲ್ಕ ಪಾವತಿಸಲು ಪ್ರಾರಂಭ ದಿನಾಂಕ	06.10.2023
2.	ವಿದ್ಯಾರ್ಥಿಗಳಿಗೆ ದಂಡ ರಹಿತ ಶುಲ್ಕ ಪಾವತಿಸಲು ಕೊನೆಯ ದಿನಾಂಕ	03.11.2023
3.	ವಿದ್ಯಾರ್ಥಿಗಳಿಗೆ ರೂ 100/- ದಂಡ ಶುಲ್ಕದೊಂದಿಗೆ ಶುಲ್ಕ ಪಾವತಿಸಲು ಕೊನೆಯ ದಿನಾಂಕ	06.11.2023
4.	ವಿದ್ಯಾರ್ಥಿಗಳಿಗೆ ರೂ 500/- ದಂಡ ಶುಲ್ಕದೊಂದಿಗೆ ಶುಲ್ಕ ಪಾವತಿಸಲು ಕೊನೆಯ ದಿನಾಂಕ	08.11.2023
5.	ವಿದ್ಯಾರ್ಥಿಗಳಿಗೆ ರೂ. 600/- ದಂಡ ಶುಲ್ಕದೊಂದಿಗೆ ವಿಶೇಷ ಅನುಮತಿಯ ಕೊನೆಯ ದಿನಾಂಕ	10.11.2023
6.	ಕಾಲೇಜಿನವರು ವಿದ್ಯಾರ್ಥಿಗಳ ಪರೀಕ್ಷಾ ಶುಲ್ಕದ ವಿವರಗಳನ್ನು UUCMS/ EMS ಮೂಲಕ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಲು ಕೊನೆಯ ದಿನಾಂಕ	13.11.2023

ಪು.ತಿ.ನೋ.

ದ್ವಿತೀಯ ಮತ್ತು ನಾಲ್ಕನೇ ಸೆಮಿಸ್ಟರ್ ಪರೀಕ್ಷೆಗಳಿಗೆ ಪರೀಕ್ಷಾ ಶುಲ್ಕದ ವಿವರಗಳು

ಪರೀಕ್ಷಾ ಶುಲ್ಕಗಳ ವಿವರ - (Freshers-UUCMS)		
ಕ್ರ. ಸಂ.	ಪದವಿಗಳ ವಿವರ	ಪರೀಕ್ಷಾ ಶುಲ್ಕ
1	ಎಂ.ಬಿ.ಎ	2000.00
2	ಎಂ.ಸಿ.ಎ.	2450.00
ಇತರೆ ಶುಲ್ಕಗಳು (ಪರೀಕ್ಷಾ ಶುಲ್ಕದಲ್ಲಿ ಲಯಾಂಖಿತ ಪಡೆದಿರುವ ಹಾಗೂ ಪಡೆಯದಿರುವ ವಿದ್ಯಾರ್ಥಿಗಳೂ ಸಹ ಈ ಕೆಳಗೆ ನಮೂದಿಸಿರುವ ಇತರೆ ಶುಲ್ಕಗಳನ್ನು ಕಡ್ಡಾಯವಾಗಿ ಪಾವತಿಸುವುದು. (ಅನ್ವಯಿಸುವ ಶುಲ್ಕಗಳು ಮಾತ್ರ)):		
1	ಅಂಕಪಟ್ಟಿ ಶುಲ್ಕ	156.00
2	ಆನ್‌ಲೈನ್ ಅರ್ಜಿ ಶುಲ್ಕ	30.00
3	ಅರ್ಜಿ ಪರಿಶೀಲನಾ ಶುಲ್ಕ	10.00
4	ಪರೀಕ್ಷಾ ಸಿದ್ಧತಾ ಶುಲ್ಕ (Process fee)	40.00

ಸೂಚನೆ: ಈ ಮೇಲ್ಕಂಡ ಕೋಷ್ಟಕದಲ್ಲಿರುವ ಪರೀಕ್ಷಾ ಶುಲ್ಕವು (2022-23ನೇ ಸಾಲಿನ) ನವೀನ ವಿದ್ಯಾರ್ಥಿಗಳಿಗೆ ಮಾತ್ರ ಅನ್ವಯಿಸುತ್ತದೆ ಹಾಗೂ ಸದರಿ ವಿದ್ಯಾರ್ಥಿಗಳು UUCMS ಮುಖಾಂತರ ಶುಲ್ಕವನ್ನು ಪಾವತಿಸಿ ಶುಲ್ಕದ ಮುದ್ರಿತ ಪ್ರತಿಯನ್ನು ಸಂಬಂಧಪಟ್ಟ ಸ್ನಾತಕೋತ್ತರ ವಿಭಾಗದ ಮುಖ್ಯಸ್ಥರಿಗೆ/ಕಾಲೇಜಿನ ಪ್ರಾಂಶುಪಾಲರಿಗೆ ಸಲ್ಲಿಸುವುದು.

ಸೂಚನೆ: ಈ ಕೆಳಕಂಡ ಕೋಷ್ಟಕದಲ್ಲಿರುವ ಪರೀಕ್ಷಾ ಶುಲ್ಕವು (2021-22ನೇ ಸಾಲಿನ) ಪೂರಕ ವಿದ್ಯಾರ್ಥಿಗಳಿಗೆ ಮಾತ್ರ ಅನ್ವಯಿಸುತ್ತದೆ ಹಾಗೂ ಸದರಿ ವಿದ್ಯಾರ್ಥಿಗಳು UUCMS ಮುಖಾಂತರ ಶುಲ್ಕವನ್ನು ಪಾವತಿಸಿ ಶುಲ್ಕದ ಮುದ್ರಿತ ಪ್ರತಿಯನ್ನು ಸಂಬಂಧಪಟ್ಟ ಸ್ನಾತಕೋತ್ತರ ವಿಭಾಗದ ಮುಖ್ಯಸ್ಥರಿಗೆ/ಕಾಲೇಜಿನ ಪ್ರಾಂಶುಪಾಲರಿಗೆ ಸಲ್ಲಿಸುವುದು.

ಕ್ರ.ಸಂ.	ಪರೀಕ್ಷಾ ಶುಲ್ಕಗಳ (Repeaters) ಪದವಿಗಳ ವಿವರ	ಪರೀಕ್ಷಾ ಶುಲ್ಕ	ಪೂರಕ (ಒಂದು ವಿಷಯಕ್ಕೆ)
1	ಎಂ.ಬಿ.ಎ.	2000.00	485-00
	ಎಂ.ಸಿ.ಎ.	2450.00	485-00
ಇತರೆ ಶುಲ್ಕಗಳು (ಪರೀಕ್ಷಾ ಶುಲ್ಕದಲ್ಲಿ ಲಯಾಂಖಿತ ಪಡೆದಿರುವ ಹಾಗೂ ಪಡೆಯದಿರುವ ವಿದ್ಯಾರ್ಥಿಗಳೂ ಸಹ ಈ ಕೆಳಗೆ ನಮೂದಿಸಿರುವ ಇತರೆ ಶುಲ್ಕಗಳನ್ನು ಕಡ್ಡಾಯವಾಗಿ ಪಾವತಿಸುವುದು. (ಅನ್ವಯಿಸುವ ಶುಲ್ಕಗಳು ಮಾತ್ರ)):			
1	ಅಂಕಪಟ್ಟಿ ಶುಲ್ಕ	156.00	
2	ಆನ್‌ಲೈನ್ ಅರ್ಜಿ ಶುಲ್ಕ	30.00	
3	ಅರ್ಜಿ ಪರಿಶೀಲನಾ ಶುಲ್ಕ	10.00	
4	ಪರೀಕ್ಷಾ ಸಿದ್ಧತಾ ಶುಲ್ಕ (Process fee)	40.00	
5	ಪ್ರಾಯೋಗಿಕ ಶುಲ್ಕ (per practical)	150.00	
6	ಪ್ರಾಜೆಕ್ಟ್ ಶುಲ್ಕ (per project)	200.00	
7	ಕಿರು ಪ್ರಬಂಧ ಶುಲ್ಕ (per Dissertation)	200.00	
8	ಮೌಖಿಕ ಸಂದರ್ಶನ (per viva-voce)	150.00	

ವಿಶೇಷ ಸೂಚನೆ: ನಾಲ್ಕನೇ ಸೆಮಿಸ್ಟರ್ ವಿದ್ಯಾರ್ಥಿಗಳಿಗೆ ಅನ್ವಯಿಸಿದ್ದಲ್ಲಿ ಮಾತ್ರ (Dissertation/ Project Work/per Viva-Voce) 200+ 150=350/- ಶುಲ್ಕವನ್ನು ವಿದ್ಯಾರ್ಥಿಗಳು **SB Collect** ನಲ್ಲಿ **Finance officer, Tumkur University, Tumkur** ಮುಖಾಂತರ ಶುಲ್ಕವನ್ನು ಪಾವತಿಸಿ ರಸೀದಿಯನ್ನು ಸಂಬಂಧಪಟ್ಟ ವಿಭಾಗಗಳು/ಕಾಲೇಜುಗಳಿಗೆ ಸಲ್ಲಿಸುವುದು.

2022-23 ನೇ ಸಾಲಿಗೆ UUCMS ತಂತ್ರಾಂಶದ ಮೂಲಕ ದ್ವಿತೀಯ ಮತ್ತು ನಾಲ್ಕನೇ ಸೆಮಿಸ್ಟರ್‌ಗೆ ಪ್ರವೇಶ ಪಡೆದಿರುವ ಎಲ್ಲಾ ಅರ್ಹ (ನವೀನ & ಪೂರಕ) ವಿದ್ಯಾರ್ಥಿಗಳು ತಮ್ಮ ಲಾಗಿನ್ ಮೂಲಕ ಪರೀಕ್ಷಾ ಶುಲ್ಕ ಹಾಗೂ ಪತ್ರಿಕೆ/ವಿಷಯಗಳ ವಿವರಗಳನ್ನು ಸರಿಯಾಗಿ ನಮೂದಿಸುವಂತೆ ತಿಳಿಸಿ ಸೂಚನಾ ಫಲಕದಲ್ಲಿ ಪ್ರಕಟಿಸಿ ವಿದ್ಯಾರ್ಥಿಗಳ ಗಮನಕ್ಕೆ ತರುವುದು.

**ಪರೀಕ್ಷಾ ಕೇಂದ್ರ ಹೊಂದಿರುವ ಕಾಲೇಜಿನವರು ತಮ್ಮ ಕೇಂದ್ರದಲ್ಲಿ ಪರೀಕ್ಷೆ ನಡೆಯುವ ಒಟ್ಟು ದಿನಗಳಲ್ಲಿ ಒಂದು ದಿನದ ಗರಿಷ್ಠ ವಿದ್ಯಾರ್ಥಿಗಳ ಸಂಖ್ಯೆಯನ್ನು ನಮೂದಿಸಿ ಪ್ರತಿ ವಿದ್ಯಾರ್ಥಿಗೆ ವಿಶ್ವವಿದ್ಯಾನಿಲಯವು ವಿಭಾಗವಾರು ನಿಗದಿಪಡಿಸಿರುವ ದರಗಳಂತೆ ಪ್ರತ್ಯೇಕ ಹುಂಡಿಗಳನ್ನು ಸಿದ್ಧಪಡಿಸಿ ಪರೀಕ್ಷಾ ವಿಭಾಗಕ್ಕೆ ಸಲ್ಲಿಸುವುದು.

ಪು.ತಿ.ನೋ.

ಉಲ್ಲೇಖ (1) ರ ದಿನಾಂಕ: 20.01.2023 ರ ಸಿಂಡಿಕೇಟ್ ಸಭಾ ನಿರ್ಣಯದಂತೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ವಿದ್ಯಾರ್ಥಿವೇತನ ಸರ್ಕಾರದ DBT (Direct Beneficiary Transfer) ಯೋಜನೆಯಡಿಯಲ್ಲಿ ನೇರವಾಗಿ ವಿದ್ಯಾರ್ಥಿಗಳ ಖಾತೆಗೆ ಜಮೆಯಾಗುತ್ತಿರುವ ಹಿನ್ನೆಲೆಯಲ್ಲಿ ಹಾಗೂ ಸಂಬಂಧಪಟ್ಟ ಕಾಲೇಜಿಗಾಗಲಿ ಅಥವಾ ವಿಶ್ವವಿದ್ಯಾನಿಲಯಕ್ಕಾಗಲಿ ವಿದ್ಯಾರ್ಥಿ ವೇತನವು ಮಂಜೂರಾಗದ ಹಿನ್ನೆಲೆಯಲ್ಲಿ ಎಲ್ಲಾ ವರ್ಗದ ವಿದ್ಯಾರ್ಥಿಗಳಿಂದ ಪೂರ್ಣ ಪ್ರಮಾಣದ ಪರೀಕ್ಷಾ ಶುಲ್ಕವನ್ನು ಸೆಮಿಸ್ಟರ್‌ವಾರು ಕಡ್ಡಾಯವಾಗಿ ಪಾವತಿಸಿಕೊಳ್ಳುವುದು (ನವೀನ & ಪೂರಕ).

ವಿದ್ಯಾರ್ಥಿಯು ಪರೀಕ್ಷಾ ಶುಲ್ಕ ಪಾವತಿಸಿದಾಕ್ಷಣ ಪರೀಕ್ಷೆ ಬರೆಯಲು ಅರ್ಹನೆಂದು ತಿಳಿಯಬಾರದು. ವಿಶ್ವವಿದ್ಯಾನಿಲಯದ ನಿಯಮಾನುಸಾರ ಅರ್ಹತೆಯಿದ್ದಲ್ಲಿ ಮಾತ್ರ ಪರೀಕ್ಷೆ ಬರೆಯಲು ಅವಕಾಶವಿರುತ್ತದೆ. ಯಾವುದೇ ಕಾರಣಕ್ಕೂ ಪರೀಕ್ಷಾ ಕೇಂದ್ರವನ್ನು ಬದಲಾಯಿಸುವಂತಿಲ್ಲ.

ಪ್ರಾಯೋಗಿಕ ಪರೀಕ್ಷೆಗಳನ್ನು ಸೈದ್ಧಾಂತಿಕ ಪರೀಕ್ಷೆಗಳ ನಂತರ UUCMS ತಂತ್ರಾಂಶದಲ್ಲಿ ನಿಗಧಿಪಡಿಸಲಾದ ದಿನಾಂಕದೊಳಗೆ ನಡೆಸತಕ್ಕದ್ದು. ಪ್ರಾಯೋಗಿಕ ಪರೀಕ್ಷಾ ವೇಳಾಪಟ್ಟಿಯನ್ನು ಸಂಬಂಧಿಸಿದ ಪರೀಕ್ಷಾ ಮಂಡಳಿ ಅಧ್ಯಕ್ಷರುಗಳಿಂದ ಅನುಮೋದನೆ ಪಡೆದುಕೊಂಡು UUCMS ತಂತ್ರಾಂಶದಲ್ಲಿ ನಮೂದಿಸುವುದು ಮತ್ತು ಮುಖ್ಯಸ್ಥರು/ ಸಂಯೋಜಕರು/ಪ್ರಾಂಶುಪಾಲರುಗಳು ಸಂಬಂಧಿಸಿದ ಪರೀಕ್ಷಾ ಕೇಂದ್ರಗಳಲ್ಲಿ ಪ್ರಕಟಿಸುವುದು.

<u>ಆಂತರಿಕ ಅಂಕಗಳನ್ನು ಸಲ್ಲಿಸುವ ಕುರಿತು ಸೂಚನೆಗಳು:</u>

1. ಸೈದ್ಧಾಂತಿಕ (Theory) ಪರೀಕ್ಷೆಗಳು ಪ್ರಾರಂಭವಾಗುವುದಕ್ಕಿಂತ ಮುಂಚಿತವಾಗಿ UUCMS ತಂತ್ರಾಂಶದಲ್ಲಿ ನಿಗಧಿಪಡಿಸಲಾದ ದಿನಾಂಕದೊಳಗೆ ಆಂತರಿಕ ಅಂಕಗಳನ್ನು ಮತ್ತು ವಿದ್ಯಾರ್ಥಿಗಳ ಹಾಜರಾತಿ ವಿವರಗಳನ್ನು ಮುಖ್ಯಸ್ಥರು/ಸಂಯೋಜಕರು ಕಾಲೇಜಿನವರು ನಮೂದಿಸಿ, ಪರಿಶೀಲಿಸಿ ಅನುಮೋದಿಸುವುದು ಹಾಗೂ ಧೃಡೀಕೃತ ಪ್ರತಿಯನ್ನು ಕುಲಸಚಿವರು(ಪರೀಕ್ಷಾಂಗ), ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು ಇವರಿಗೆ ಸಲ್ಲಿಸುವುದು , ವಿಳಂಭವಾದಲ್ಲಿ ದಿನವೊಂದಕ್ಕೆ ರೂ. 1,000/- ಗಳಂತೆ ಗರಿಷ್ಠ ರೂ. 10,000-00 (ಹತ್ತು ಸಾವಿರ) ಗಳನ್ನು ದಂಡವಾಗಿ ವಿಧಿಸಲಾಗುತ್ತದೆ.
2. ವಿದ್ಯಾರ್ಥಿಗಳಿಗೆ ಆಂತರಿಕ ಅಂಕಗಳನ್ನು ನೀಡುವುದು ಸಂಬಂಧಪಟ್ಟ ವಿಭಾಗದ ಮುಖ್ಯಸ್ಥರು/ಸಂಯೋಜಕರ ಜವಾಬ್ದಾರಿಯಾಗಿದ್ದು,ಯಾವುದೇ ರೀತಿಯ ಲೋಪದೋಷಗಳಾಗದಂತೆ ಎಚ್ಚರಿಕೆ ವಹಿಸುವುದು. ಫಲಿತಾಂಶ ಪ್ರಕಟಗೊಂಡ ನಂತರ ಯಾವುದೇ ಕಾರಣಕ್ಕೂ ಆಂತರಿಕ ಅಂಕಗಳನ್ನು ಬದಲಿಸುವುದಿಲ್ಲ.

ಎಲ್ಲಾ, ಮುಖ್ಯಸ್ಥರು/ನಿರ್ದೇಶಕರು/ಪ್ರಾಂಶುಪಾಲರು ಸಹಕರಿಸಬೇಕಾಗಿ ಕೋರಲಾಗಿದೆ.

ಆದೇಶದ ಮೇರೆಗೆ,

6/10/23

ಕುಲಸಚಿವರು (ಪರೀಕ್ಷಾಂಗ)

ಗೆ, ಮುಖ್ಯಸ್ಥರು/ ಸಂಯೋಜಕರು /ನಿರ್ದೇಶಕರು / ಪ್ರಾಂಶುಪಾಲರು/ ವಿವಿಧ ಸ್ನಾತಕೋತ್ತರ ವಿಭಾಗಗಳು ಮತ್ತು ಎಲ್ಲಾ ಸ್ನಾತಕೋತ್ತರ ಸಂಯೋಜಿತ ಪದವಿ ಕಾಲೇಜುಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.

ಪ್ರತಿಗಳು:

1. ಸರ್ಕಾರದ ಅಧೀನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ), ಎಂ.ಎಸ್. ಬಿಲ್ಡಿಂಗ್-2, ಡಾ. ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು-01.
2. ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಅರಮನೆ ರಸ್ತೆ, ಬೆಂಗಳೂರು.
3. ಹಣಕಾಸು ಅಧಿಕಾರಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
4. ಉಪಕುಲಸಚಿವರು(ಶೈಕ್ಷಣಿಕ ವಿಭಾಗ), ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
5. ಮಾನ್ಯ ಕುಲಪತಿಗಳ ಆಪ್ತ ಕಾರ್ಯದರ್ಶಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
6. ಮಾನ್ಯ ಕುಲಸಚಿವರ ಆಪ್ತ ಸಹಾಯಕರು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
7. ಸಿಸ್ಟಂ ಅನಾಲಿಸ್ಟ್, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು - ವಿಶ್ವವಿದ್ಯಾನಿಲಯದ ಅಂತರ್ಜಾಲ (website) ದಲ್ಲಿ ಪ್ರಕಟಿಸುವುದು.
8. ಫಲಿತಾಂಶ ಗಣಕೀಕರಣ ವಿಭಾಗ, ಪರೀಕ್ಷಾ ಭವನ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
9. ಕಛೇರಿ ಪ್ರತಿ.